## ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.ರವರ ನ್ಯಾಯಾಲಯ, ಸುಳ್ಯ ದ.ಕ.

**ಸಿ.ಸಿ.ಸಂ.861/2024**

ಫಿರ್ಯಾದುದಾರರು ಃ ಸರ್ಕಾರದ ಪರ ಸುಬ್ರಹ್ಮಣ್ಯ ಆರಕ್ಷಕರು

ಃಃ ವಿರುದ್ಧ ಃಃ

ಆರೋಪಿಗಳು ಃ 1. **ಖಲಾಂದರ್ ಶಾಫಿ ಬಿನ್ ಅಂದುನಿ,**
ಪ್ರಾಯಃ 35 ವರ್ಷ, ವೃತ್ತಿಃ ವಾಹನ ಚಾಲಕ,
ವಾಸಃ ಬೋಡು ಮನೆ, ಬೆಳ್ಳಾರೆ ಗ್ರಾಮ, ಸುಳ್ಯ ತಾಲೂಕು, ದ.ಕ.

2. **ಇಕ್ಬಾಲ್ ಬಿನ್ ಅಬುಬೂಕ್ಕರ್**
ಪ್ರಾಯಃ 36 ವರ್ಷ, ವೃತ್ತಿಃ ವಾಹನ ಚಾಲಕ,
ವಾಸಃ ಪಾನೆಡ್ಕ ಮನೆ, ಬಳ್ನಾಡು ಗ್ರಾಮ,
ಪುತ್ತೂರು ತಾಲೂಕು, ದ.ಕ.

### ಃಃ ದೋಷಾರೋಪಣೆ ಃಃ

ಅರ್ಪಿತಾ ಬಿ .ಎ .(ಲಾ ), ಎಲ್ .ಎಲ್ .ಬಿ ., ಸಿ .ಜೆ ಮತ್ತು ಜೆ.ಎಂ.ಎಫ್.ಸಿ., ಸುಳ್ಯ ಆದ ನಾನು ಮೇಲ್ಕಂಡ ಆಪಾದಿತರಾದ ನಿಮ್ಮ ಮೇಲೆ ಕೆಳಕಂಡಂತೆ ಆರೋಪಗಳನ್ನು ಹೊರಿಸುತ್ತಿದ್ದೇನೆ.

ಮೊದಲನೇಯದಾಗಿ, ಆರೋಪಿಗಳಾದ ನೀವು ದಿನಾಂಕ 24-09-2023 ರಂದು ರಾತ್ರಿ 22-30 ಗಂಟೆಗೆ, ಸುಳ್ಯ ತಾಲೂಕು, ಐವತ್ತೊಕ್ಲು ಗ್ರಾಮದ, ನಾಯರ್ ಕೆರೆ-ಪಾಂಡಿ ಗದ್ದೆ ರಸ್ತೆಯ ಕುಳ್ಳುಕೋಡಿ ಎಂಬಲ್ಲಿ, 5 ಜಾನುವಾರುಗಳ ಕಾಲುಗಳನ್ನು ಹಗ್ಗದಿಂದ ಕಟ್ಟಿ ಹಿಂಸಾತ್ಮಕ ರೀತಿಯಲ್ಲಿ ಯಾವುದೇ ಪರವಾನಿಗೆ ಇಲ್ಲದೇ, ಬೊಲೆರೋ ಮ್ಯಾಕ್ಸಿ ಪಿಕಪ್ ವಾಹನ ನಂ ಕೆಎ 22 ಸಿ 5884 ರಲ್ಲಿ ಚಾ.ಸಾ-5 ಇಸ್ಮಾಯಿಲ್ ರವರಿಂದ ಖರೀದಿ ಮಾಡಿ ಸಾಗಾಟ ಮಾಡುತ್ತಿದ್ದು, ಆ ಮೂಲಕ ಕಲಂ: 5, 6, 7, 12 ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಕಾಯ್ದೆ -2020 ಹಾಗೂ ಕಲಂ, 11(1)(A), 11(1)(D)-1960

ಪ್ರಾಣಿ ಹಿಂಸೆ ನಿಷೇಧ ಕಾಯ್ದೆ –1960 ರೀತ್ಯಾ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೇಯದಲ್ಲಿ ಮಾಡಿರುವಿರಿ?

ಮೇಲ್ಕಂಡ ಆರೋಪದ ಮೇಲೆ ನೀವು ಈ ನ್ಯಾಯಾಲಯದ ಆರೋಪ ವಿಚಾರಣೆಗೆ ಗುರಿಯಾಗತಕ್ಕದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ಸ್ಥಳಃ ಸುಳ್ಯ
ದಿನಾಂಕಃ 13–10–2025

ಸಿ.ಜೆ. ಮತ್ತು ಜೆ.ಎಂ.ಎಫ್.ಸಿ, ಸುಳ್ಯ,ದ.ಕ.